**ಎಂಟನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು, ಹುಣಸೂರು ಪೀಠ.**

**SC No**.185/2022

**PW**. 5

**CW**. 10

**ಸಾಕ್ಷಿಯ ಹೆಸರು –ಸಂತೋಷ ಎಂ**

**ತಂದೆಯ ಹೆಸರು –ಮಲ್ಲಿಕಾರ್ಜುನ ಸಣ್ಣೂರು**

**ವಯಸ್ಸು –47 ವರ್ಷಗಳು** ದಿನಾಂಕ 22–04–2025 ರಂದು ಪ್ರಮಾಣವಚನ ಬೋಧಿಸಲಾಯಿತು.

**ಉದ್ಯೋಗ –ವ್ಯಾಪಾರ**

**ವಾಸಸ್ಥಳ –ಮುಳ್ಳೂರು ಗ್ರಾಮ , ಹೆಚ್ ಡಿ ಕೋಟೆ**

**ಮುಖ್ಯ ವಿಚಾರಣೆಃ– ಸರ್ಕಾರಿ ಅಭಿಯೋಜಕರಿಂದಃ–**

ಚಾಸಾ–1, 2, ಮೃತ ಮತ್ತು 1 ನೇ ಆರೋಪಿ ಗೊತ್ತು. ಈಗ್ಗೆ 3 ವರ್ಷಗಳ ಹಿಂದೆ ಮೃತ ಬಸವರಾಜನನ್ನು ಕೊಲೆಯಾಗಿ ಮೃತಪಟ್ಟ ಎಂದು ಗೊತ್ತಾಯಿತು. ಪೊಲೀಸರು ಸ್ಥಳಕ್ಕೆ ಬಂದ ನಂತರ ಬೆಳಗ್ಗೆ 10.00 ಗಂಟೆಗೆ ನಾನು ಅವರ ಮನೆಯ ಬಳಿ ಹೋಗಿದ್ದೆ. ಪೊಲಿಸೀರು ಮೃತನ ಮನೆಯ ಕೊಠಡಿಯಲ್ಲಿ ಪಂಚನಾಮೆ ಮಾಡಿ, ಕೊಠಡಿಯಿಂದ ರಕ್ತಸಿಕ್ತ ಚಾಕು, ಒಂದು ಬೆಡ್ ಶಿಟ್ ಅನ್ನು ಜಪ್ತಿ ಮಾಡಿ , ನನ್ನ ಸಹಿ ಪಡೆದರು. ಸದರಿ ಪಂಚನಾಮೆಗೆ ಚಾಸಾ–1 ಮತ್ತು 9 ಸಹಿ ಮಾಡಿದ್ದಾರೆ. ಸದರಿ ಪಂಚನಾಮೆಯನ್ನು ಈಗಾಗಲೇ ನಿಪಿ–2 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ–2(ಬಿ) ಎಂದು ಗುರುತಿಸಲಾಯಿತು. ನಂತರ ಮೃತದೇಹವನ್ನು ಆಸ್ಪತ್ರೆಗೆ ಸಾಗಿಸಿದರು.

**SC No.185/2022**
**PW.5**

**ಪಾಟೀಸವಾಲುಃ- ಆರೋಪಿತರ ಪರ ಶ್ರೀ ಎಸ್ ಪಿ ವಕೀಲರಿಂದಃ-**

ಪೊಲೀಸರು ಪಂಚನಾಮೆಗೆ ಬರಲು ನೋಟೀಸ್ ನೀಡಿಲ್ಲ ಎಂದರೆ ಸರಿ. ನಿಪಿ-2 ಕ್ಕೆ ಪೊಲೀಸರ ಕೋರಿಕೆಯ ಮೇರೆಗೆ ಸಹಿ ಮಾಡಿದ್ದೇನೆ ಎಂದರೆ ಸರಿ. ಮು.ಮಾ-1 ಮತ್ತು 2 ಅನ್ನು ನೋಡಿದರು ನನಗೆ ಗುರುತಿಸಲು ಆಗುವುದಿಲ್ಲ ಎಂದರೆ ಸರಿ. ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿಲ್ಲ ಮತ್ತು ಯಾವುದೇ ಮುದ್ದೆಮಾಲುಗಳನ್ನು ಜಪ್ತಿ ಮಾಡಿಲ್ಲ ಎಂದರೆ ಸರಿಯಲ್ಲ. ನಿಪಿ-2 ರ ಪಂಚನಾಮೆಗೆ ನಾನು ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ** ಇಲ್ಲ.

**ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

ಓ ಹೇ ಕೇ ಸರಿ ಇದೆ ಎಂದು ಒಪ್ಪಿದ ಮೇರೆಗೆ,

ಎಂಟನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು, ಹುಣಸೂರು ಪೀಠ.